**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ ಉಡುಪಿ**

**ಸ್ಪೆಷಲ್ ಕೇಸ್ ನಂಃ 58/2021 ಪಿ.ಡಬ್ಲ್ಯುಃ 5**

**ಸಿ.ಡಬ್ಲ್ಯುಃ 7**

| | |
|---|---|
| ಸಾಕ್ಷಿದಾರರ ಹೆಸರು | ರಾಜೇಶ್ |
| ತಂದೆಯ ಹೆಸರು | ಎಂ.ಪಾಲಾಕ್ಷ |
| ವಯಸ್ಸು | 47 ವರ್ಷ |
| ಉದ್ಯೋಗ | ಪಿ.ಡಬ್ಲ್ಯುಡಿ ಕಾಂಟ್ರಾಕ್ಟರ್ |
| ವಿಳಾಸ | ಉಡುಪಿ |

ದಿನಾಂಕಃ 17-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ**

1) ನಾನು ನನ್ನ ಗುತ್ತಿಗೆ ಕೆಲಸಕ್ಕೆ ಗಾರ್ಡನ್ ಮೈಟೆನೆನ್ಸ್, ಸೆಕ್ಯುರಿಟಿ ಗಾರ್ಡ್ ಮತ್ತು ಸಣ್ಣ ಪ್ರಮಾಣದ ಕಟ್ಟಡ ಕಾಮಗಾರಿಗಳ ಕೆಲಸವನ್ನು ಸಹ ಮಾಡುತ್ತೇನೆ. 2 ನೇ ಅರೋಪಿಯ ಬಗ್ಗೆ ಎಸಿಬಿ ಪೊಲೀಸರು 2019ರ ಸಾಲಿನಲ್ಲಿ ನನಗೆ ನೋಟಿಸೊಂದನ್ನು ನೀಡಿ ಮಾಹಿತಿ ಕೇಳಿದ್ದರು. ಆ ನೋಟಿಸನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ನೋಟಿಸಿಗೆ ನಾನು ಉತ್ತರಿಸಿದ್ದೆ. ಆ ಉತ್ತರವನ್ನು ನೋಡಿದರೆ ಗುರುತಿಸಬಲ್ಲೆ. 2 ನೇ ಅರೋಪಿಗೆ ಸಂಬಳವನ್ನು ಆತನ ಖಾತೆಯ ಮೂಲಕ ಪಾವತಿಸಿದ್ದೆವು. ಕೊನೆಯ ತಿಂಗಳ ಸಂಬಳವನ್ನು ನಗದಾಗಿಯೇ ಪಾವತಿಸಿದ್ದೆವು. ಅದಕ್ಕಾಗಿ ಕೊಟ್ಟಿದ್ದ ಮಾಹಿತಿಯ ದಾಖಲೆಯನ್ನು ಈಗ ನೋಡಿ ನಿಶಾನೆ ಪಿ-26 ಎಂದು, ಅದರಲ್ಲಿಯ ನನ್ನ ಸಹಿಯನ್ನು ನಿಶಾನೆ ಪಿ-26(ಎ) ಎಂದು ಗುರುತಿಸಿದ್ದೇನೆ.

2) 2 ನೇ ಆರೋಪಿತನನ್ನು ಎಸಿಬಿ ಪೊಲೀಸರು ದಸ್ತಗಿರಿ ಮಾಡಿ ನನ್ನನ್ನು ವಿಚಾರಣೆಗೆ ಕರೆಸಿದ್ದರು,ಆಗ ನಿಪಿ-26 ನ್ನು ಅವರ ಕೋರಿಕೆಯಂತೆ ಕೊಟ್ಟಿದ್ದೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎ.ಬಿ.ಹೆಚ್. ವಕೀಲರಿಂದ**

1) 2 ನೇ ಆರೋಪಿ ನನಗೆ ಆತನನ್ನು ನೇಮಕಾತಿ ಮಾಡುವ ಮೊದಲಿನಿಂದಲೂ ಪರಿಚಯದವ. 2 ನೇ ಅರೋಪಿ ನಾನು ನೇಮಿಸಿದ ಕೆಲಸದೊಂದಿಗೆ ಆತನ ಕೋಳಿಯ ವ್ಯವಹಾರವನ್ನು ಸಹ ಮಾಡಿಕೊಂಡಿದ್ದ. ಆತನ

ಬಳಿ ಕೆಂಪು ಬಣ್ಣದ ಜ್ಯುಪಿಟರ್ ಸ್ಕೂಟಿ ಇತ್ತು. ಆದಿನ ದಿನಾಂಕ 16-03-2019 ರಂದು ನಾನು ಸ್ಥಳಕ್ಕೆ ಬಂದಿದ್ದೆ. ನನಗೆ 2-30 – 3 ಗಂಟೆಯ ಸಮಯದಲ್ಲಿ ಕುಮಾರ್ ಎಂಬ ಸೆಕ್ಯುರಿಟಿಯವರು ಫೋನ್ ಮಾಡಿ ಬರಲು ಹೇಳಿದ್ದರು. ನಾನು ಆರ್ ಟಿ ಓ ಕಚೇರಿಗೆ ಬಂದಾಗ 3-30 ಗಂಟೆಯ ಸಮಯ.

2) ಆದಿನ ವೆಹಿಕಲ್ ಪಾರ್ಕಿಂಗ್ ಜಾಗದಲ್ಲಿ 2 ನೇ ಅರೋಪಿತನನ್ನು ತಪಾಸು ಮಾಡುತ್ತಿದ್ದರು. ಆಗ 3-30 - 3-35 ರ ಸಮಯವಾಗಿತ್ತು. ಆಗ 3 – 4 ಜನ ಪೊಲೀಸರು ಇದ್ದರು. ಆಗ ನಾನು ವಿಚಾರಿಸಿದಾಗ ನನಗೆ ದೂರ ನಿಲ್ಲಲು ಹೇಳಿದ್ದರು. ಅಲ್ಲಿ 2 ನೇ ಅರೋಪಿತನ ಸ್ಕೂಟಿಯಿಂದ ನೀಲಿ ಬಣ್ಣದ ಬ್ಯಾಗ್ ಒಂದನ್ನು ತೆಗೆದುಕೊಂಡಿದ್ದರು. 2 ನೇ ಆರೋಪಿತನನ್ನು ಕರೆದುಕೊಂಡು ಪುನಃ ಕಟ್ಟಡದ ಒಳಗೆ ಹೋಗಿದ್ದರು. ನಮ್ಮನ್ನು ಬಿಡಲಿಲ್ಲ. ಪೊಲೀಸರು ಸ್ಕೂಟಿಯ ಹತ್ತಿರ 10 ನಿಮಿಷಕ್ಕಿಂತ ಕಡಿಮೆ ಸಮಯದಲ್ಲಿ ಇದ್ದರು.

**ಮರುವಿಚಾರಣೆಃ ಇಲ್ಲ-**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್.ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ